ಇಂದಿನ ಹರಿಯಾಣ, ಪಂಜಾಬ್, ರಾಜಸ್ಥಾನ, ಗುಜರಾತ್ ರಾಜ್ಯಗಳಲ್ಲಿ ಪ್ರವಹಿಸುತ್ತಿದ್ದ ಸರಸ್ವತಿ, ಪಾಕಿಸ್ತಾನದ ಭೂಮಿಯನ್ನು ನೆನೆಸಿ ಅರಬ್ಬಿ ಸಮುದ್ರ ಸೇರುತ್ತಿತ್ತು ಎಂದು ಪುರಾವೆಗಳು ಸ್ಪಷ್ಟಪಡಿಸಿವೆ. ಅಂದಾಜು 1500 ಕಿ.ಮೀ. ದೂರ ಹರಿಯುತ್ತಿದ್ದ ನದಿಯದು. ಆ ನದಿಯ ಬಗ್ಗೆ ವಿಸ್ತೃತ ಸಂಶೋಧನೆಗೆ ಕೈ ಹಾಕಿದ್ದು 1819ರಲ್ಲಿ. ಸರಸ್ವತಿ ನದಿ ಹುಡುಕಾಟದಲ್ಲಿ ವಿಜ್ಞಾನಿಗಳ ಯಾತ್ರೆಯ ಅಭಿಯಾನದಲ್ಲಿ ಖ್ಯಾತ ಭೂವಿಜ್ಞಾನಿ ಪ್ರೊ. ಕೆ.ಎಸ್ ವಾಡಿಯಾ ಪ್ರಮುಖರು.

2010ರಲ್ಲಿ ಮೈಕಲ್ ಡ್ಯಾನಿನೋ ರಚಿಸಿದ **'The lost river on the trial of Saraswati'** ಕೃತಿಯಲ್ಲಿ ಸರಸ್ವತಿ ನದಿಯ ಬಗ್ಗೆ ಸಂಪೂರ್ಣ ವೈಜ್ಞಾನಿಕ ಮಾಹಿತಿಯಿದೆ. ಭೂಮಿಯ ಇತಿಹಾಸದಲ್ಲಿ ಹೋಲೋಸಿನ್ ಕಲ್ಪದಲ್ಲಿ ವಾತಾವರಣ ಬೆಚ್ಚಗಾದಂತೆ ಹಿಮಾಲಯದಲ್ಲಿ ಹಿಮಗಡ್ಡೆಗಳು ಕರಗಿ ಹರಿದ ನದಿಗಳಲ್ಲಿ ಸರಸ್ವತಿಯೂ ಒಂದು. ಮೂರು ಸಾವಿರ ವರ್ಷಗಳ ಹಿಂದೆ ಭೂಫಲಕದ ಕ್ಷೋಭೆಯಿಂದ ಹಿಮಾಲಯದಿಂದ ಹರಿದು ಬರುತ್ತಿದ್ದ ಸರಸ್ವತಿ ನದಿಯ ಮೇಲ್ಭಾಗ ಪೂರ್ವಕ್ಕೆ ಯಮುನಾ ನದಿಯ ಕಡೆ ತಿರುಗಿತು. ಸರಸ್ವತಿ ನದಿಗೆ ಸೇರುತ್ತಿದ್ದ ಸಟ್ಲೇಜ್ ನದಿಯು ಪಶ್ಚಿಮದತ್ತ ಮುಖಮಾಡಿ ಸಿಂಧು ನದಿ ಸೇರತೊಡಗಿತು. ಇದು ಬಹುಶಃ ಅರಾವಳಿ ಶ್ರೇಣಿಗಳು ಮೇಲೇರಿದ ಪರಿಣಾಮ ಇದ್ದಿರಬಹುದು. ಇದರಿಂದ ಸರಸ್ವತಿ ನದಿಗೆ ಎಲ್ಲಿಂದಲೂ ನೀರು ಹರಿಯದೆ ಇದ್ದ ಸ್ವಲ್ಪ ನೀರು ರಾಜಸ್ಥಾನದ ಮರಳಿನಲ್ಲಿ ಇಂಗಿ ಹೋಗಿ ಕಾಣದಾಯ್ತು. ಸರಸ್ವತಿ ನದಿ ಹರಿಯುತ್ತಿದ್ದ ಸ್ಥಳವನ್ನು ವಿವಿಧ ವೈಜ್ಞಾನಿಕ ಆಯಾಮಗಳಿಂದ ಗುರುತಿಸಿ ಅದರ ಪುನಶ್ಚೇತನಕ್ಕೆ ಪ್ರಯತ್ನಗಳೂ ನಡೆದಿವೆ.

## ದೇವಗಂಗೆಗೂ ಅಪೌಷ್ಟಿಕತೆ

ಕಾಲ ಎಲ್ಲವನ್ನು ಬದಲಿಸುತ್ತದೆ ಅನ್ನುವುದಕ್ಕೆ ವಿಜ್ಞಾನಿಗಳು ಗಂಗಾ ನದಿಯತ್ತ ಬೊಟ್ಟು ಮಾಡುತ್ತಾರೆ. ಈ ನದಿ ಕೆಲವು ರಾಜ್ಯಗಳ ಜಲಸಂಪತ್ತಿನ ಅಕ್ಷಯಪಾತ್ರೆ. ಕಾಶಿಗೆ ಹೋದವರು ವಿಶ್ವನಾಥನ ದರ್ಶನ ಮಾಡದಿದ್ದರೂ ಗಂಗೆಯಲ್ಲಿ ಮೂರು ಬಾರಿ ಮುಳುಗೆದ್ದು ಬರಲೇಬೇಕೆನ್ನುವ ಸಂಪ್ರದಾಯವಿತ್ತು. ವರ್ಷದ ಯಾವ ದಿವಸ ಹೋದರೂ ಗಂಗೆಯ ನೀರಿನ ಹರಿವಿನ ಮಟ್ಟ ಇಳಿಕೆ ಆಗುವುದೇ ಇಲ್ಲ ಎಂಬುದು ನಂಬಿಕೆ. ಈ ನದಿ, ಹಿಮಾಲಯದ ನೀರ್ಗಲ್ಲಿನ ತೀರ್ಥವಾದ ದೇವಗಂಗೆ ಎನ್ನುವ ನಂಬಿಕೆಯೂ ಇದೆ. ಗಂಗೆಯ ನೀರಿನ ಮಟ್ಟ ಹಿಗ್ಗುವುದೂ ಇಲ್ಲ ಅಥವಾ ಕುಗ್ಗುವುದೂ ಇಲ್ಲ ಎಂಬುದು ಜನರ ವಿಶ್ವಾಸ. ಕಳೆದೆರಡು ದಶಕಗಳವರೆಗೆ ಈ ಭರವಸೆಗೆ ಚ್ಯುತಿ ಬಂದಿರಲಿಲ್ಲ.

ಗಂಗಾನದಿಗೆ ಹರಿದುಬರುತ್ತಿದ್ದ ನೀರು ಕೇವಲ ಹಿಮಾಲಯದ ಜಲಾನಯನ ಒಂದರಲ್ಲೇ ಹುಟ್ಟಿ ಹರಿದಿದ್ದರೆ ನೀರಿನ ಮಟ್ಟ ಏರುಪೇರಾಗಬಹುದಿತ್ತೇನೋ? ಆದರೆ ಈ ನೀರಿನ



ನದಿಗಳಿಗೆ–ಜಲಮೂಲಗಳಿಗೆ ಉಸಿರುಗಟ್ಟಿಸುವ ಕೈಗಾರಿಕಾ ತ್ಯಾಜ್ಯ



ಇದು ಬೇಸಿಗೆ ದಿನಗಳ ನೇತ್ರಾವತಿ!

ಜೊತೆಗೆ ಶೇ. 29ರಷ್ಟು ಪ್ರಮಾಣದ ಮಂಜು ಕರಗಿ ಹಿಮ ಪ್ರವಾಹವೂ ಉಂಟಾಗಿತ್ತು. ಗಂಗಾನದಿಯ ಓಟ ಉತ್ತರ ಪ್ರದೇಶದ ಮುರ್ದಾಬಾದ್ ತನಕ ಮಾತ್ರ. ಗಂಗಾನದಿ ಉಕ್ಕಿ ಹರಿಯುವಂತೆ ಬಲ ತುಂಬುವ ಜಲಧಾರೆಗಳು ಬೇರೆ ಇವೆ. ಈ ನದಿಗೆ ಇನ್ನಿಲ್ಲದ ಶಕ್ತಿ ತುಂಬುವ ನೈಸರ್ಗಿಕ ಚೇತನ ಅಂದರೆ ಅಲ್ಲಿ ಹುಟ್ಟುವ ಬುಗ್ಗೆಗಳು, ಊಟೆ ಮತ್ತು ಚಿಲುಮೆಗಳು. ಸಾವಿರಾರು ಚಿಲುಮೆಗಳಿಂದ ಅಗಾಧ ಪ್ರಮಾಣದ ನೀರು ಗಂಗಾನದಿ ಸೇರಿ ಅದರ ಗಾತ್ರ ಮತ್ತು ಹರಿವು ಹೆಚ್ಚುತ್ತದೆ. ಇಡೀ ಹಿಮಾಲಯ ಶಿಖರ ಶ್ರೇಣಿಗಳು ಚಿಲುಮೆಗಳ ತವರು. ಭಾರತದಲ್ಲಿ ಸರಿಸುಮಾರು 5 ಲಕ್ಷ ಚಿಲುಮೆಗಳಿದ್ದು, ಇದರಲ್ಲಿ 3 ಲಕ್ಷ ಚಿಲುಮೆಗಳು ಹಿಮಾಲಯ ಶಿಖರ ಪಂಕ್ತಿಯಲ್ಲಿವೆ.

ಜಾಗತಿಕ ಹವಾಮಾನ ಬದಲಾವಣೆಗಳಿಂದ ಹಿಮಾಲಯದಲ್ಲಿ ಹುಟ್ಟುವ ಶೇ. 50ರಷ್ಟು ಚಿಲುಮೆಗಳು ಶುಷ್ಕವಾಗಿವೆ. ಅದಕ್ಕೆ ಕಾರಣ ಅಲ್ಲಿಯ ಅರಣ್ಯ ನಾಶ. ಆ ವಲಯದಲ್ಲಿ ಅಂತರ್ಜಲ ಕುಸಿದಿದೆ. ಭೂಗರ್ಭದಲ್ಲಿ ಭೂಜಲ ಸಂಪೂರ್ಣವಾಗಿ ತುಂಬಿ ಸಂತೃಪ್ತವಾಗಿದ್ದರೆ, ಅಂತರ್ಜಲ ಸೆಲೆಯ ಒತ್ತಡದಿಂದ ಜಲರಂಧ್ರಗಳು ತೆರೆದು ಚಿಲುಮೆಯಾಗಿ ಚಿಮ್ಮುತ್ತವೆ. ಅರಣ್ಯಗಳು ಭೂಜಲದ ಆಕರ. ವನರಾಶಿ ನಶಿಸಿತೆಂದರೆ ಅಂತರ್ಜಲದ ಮಟ್ಟ ಸಹಜವಾಗಿ ಕೆಳಕ್ಕೆ ಕುಸಿದ ಕಾರಣ ಚಿಲುಮೆಗಳು ಇಲ್ಲವಾಗಿವೆ. ಕಾರಣ ಏನೇ ಇದ್ದರೂ ಗಂಗೆಯಲ್ಲಿ ಮೊದಲಿದ್ದ ನೀರಿನ ಪ್ರಮಾಣ ಈಗಿಲ್ಲ ಎಂಬುದಂತೂ ಸತ್ಯ.

## ಬರಿದಾದ ನರ್ಮದಾ

ನರ್ಮದಾ ನದಿ ಭಾರತದ ಸಪ್ತ ಸಿಂಧುಗಳಲ್ಲಿ ಒಂದು. ನರ್ಮದಾ ಅಂದರೆ ಅನರ್ಘ–ಅಮೂಲ್ಯ ಎಂದರ್ಥ. ಮಧ್ಯ ಪ್ರದೇಶ ರಾಜ್ಯದ ಶಾಹದೋಲ್